ಆ) ಗಿರಿಗೌಡನ ಹಳ್ಳಿ, ನೀರಿನ ಮೇಲ್ತೊಟ್ಟಿ (OHT) ಕಾಮ ಗಾರಿಗಳನ್ನು ಮಾರ್ಚ್ 2008 ರೊಳಗಾಗಿ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ.

ಶ್ರೀ ಕೃಷ್ಣಮೂರ್ತಿ ಕೆ.ಎಂ. (ಕಡೂರು)110(362)

ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ರಾಜ್ಯದಲ್ಲಿ ಅಲೆಮಾರಿ ಜನಾಂಗದವರು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಮನೆ/ನಿವೇಶನ ರಹಿತರ ಸಮೀಕ್ಷೆ ನಡೆಸಲಾಗಿದೆಯೇ;

ಇ) ಈ ಜನಾಂಗದವರ ಮನೆ/ನಿವೇಶನ ರಹಿತರ ತಾಲ್ಲೂಕುವಾರು ಮಾಹಿತಿ ನೀಡಿ; ಇಲ್ಲದಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು;

ಈ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಮಾದರಿಯಲ್ಲಿ ಈ ಜನಾಂಗದವರಿಗಾಗಿ 2007–08ನೇ ಸಾಲಿನಲ್ಲಿ "ಒಂದು" ವಿಶೇಷ ವಸತಿ ಯೋಜನೆಯನ್ನು ರೂಪಿಸಿ ಜಾರಿಗೊಳಿಸುವುದೇ;

ಉ) 1991–92ನೇ ಸಾಲಿನ ಸರ್ಕಾರದ ಆದೇಶ ಸಂಖ್ಯೆ; ಹೆಚ್‌ಯು ಡಿ: 407:ಕೆಹೆಚ್‌ಬಿ:91, ದಿನಾಂಕ 24.06.1991 ರ ಆದೇಶದಲ್ಲಿ ಶೇ.10ರ ಮೀಸಲಾತಿಯನ್ವಯ ಆಶ್ರಯ ಯೋಜನೆಯಲ್ಲಿ ಮನೆ/ನವೇಶನ ಹಂಚಲು ಆದೇಶವಿರುವುದನ್ನು ಸಮರ್ಪಕವಾಗಿ ಜಾರಿಗೊಳಿಸಲಾಗಿದೆಯೇ;

ಊ) ಹಾಗಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಈ ಆದೇಶವನ್ನು ಪುನರ್ ಜಾರಿಗೊಳಿಸುವ ಸರ್ಕಾರದ ಕ್ರಮವೇನು?

ಶ್ರೀ ಡಿ.ಟಿ.ಜಯಕುಮಾರ್

ಅ) ಹೌದು.

ಆ) ಇಲ್ಲ

ಇ)ಸಮೀಕ್ಷೆಯಲ್ಲಿ ಅಲೆಮಾರಿ ಜನಾಂಗದವರ ವಿವರಗಳನ್ನು ಪ್ರತ್ಯೇಕವಾಗಿ ಪಡೆದಿರುವುದಿಲ್ಲ. ಒಟ್ಟಾರೆ ವಸತಿ ರಹಿತರ ಹಾಗೂ ನಿವೇಶನ ರಹಿತರ ಮಾಹಿತಿಯನ್ನು ಪಡೆಯಲಾಗಿದ್ದು, ಗ್ರಾಮೀಣ ಪ್ರದೇಶದಲ್ಲಿ 1226345 ಮತ್ತು ನಗರ ಪ್ರದೇಶದಲ್ಲಿ 73444 ವಸತಿ ರಹಿತರು ಹಾಗೂ ನಿವೇಶನ ರಹಿತರು ಗ್ರಾಮೀಣ ಪ್ರದೇಶದಲ್ಲಿ 1042986 ಮತ್ತು ನಗರ ಪ್ರದೇಶದಲ್ಲಿ 255827 ಇರುವುದು ಕಂಡುಬರುತ್ತದೆ.

ಈ)ವಿಶೇಷ ಗುಂಪಿಗೆ ಸೇರಿದ ಫಲಾನುಭವಿಗಳನ್ನು ಗುರುತಿಸಿ ಮನೆಗಳನ್ನು ನೀಡಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯು ಅಲೆಮಾರಿ ಜನಾಂಗದ ಫಲಾನುಭವಿಗಳನ್ನು ಸಹ ಗುರುತಿಸಿ ಮನೆಗಳನ್ನು ನಿರ್ಮಿಸಿಕೊಡುವ ಸಲುವಾಗಿ ವಿಶೇಷ ವರ್ಗಕ್ಕೆ ಈ ವರ್ಗವನ್ನು ಸೇರಿಸುವ ಹಾಗೂ ವಿಶೇಷ ವಸತಿ ಯೋಜನೆಯನ್ನು ರೂಪಿಸಿ ಜಾರಿಗೊಳಿಸುವ ವಿಷಯ ಪರಿಶೀಲನೆ ಯಲ್ಲಿದೆ.

ಉ) ರಾಜೀವ್ ಗಾಂಧಿ ವಸತಿ ನಗಮವು 2000ನೇ ಇಸ್ವಿಯಲ್ಲಿ ಪ್ರಾರಂಭವಾಗಿದ್ದು, ಅಂದಿನಿಂದ ಆಶ್ರಯ ಯೋಜನೆಯಡಿ ಪರಿಶಷ್ಟ ಜಾತಿ ಮತ್ತು ಪರಿಶಷ್ಟ ಪಂಗಡದ ವರ್ಗಕ್ಕೆ ಶೇಕಡ 33 ಮತ್ತು ಸಾಮಾನ್ಯ ವರ್ಗಕ್ಕೆ ಶೇಕಡ.67ರಂತೆ ಫಲಾನುಭವಿಗಳನ್ನು ಆಯ್ಕೆ ಮಾಡಿ ಕಾರ್ಯ ಕ್ರಮವನ್ನು ಅನುಷ್ಠಾನಗೊಳಿಸುತ್ತಿತ್ತು.

ತದನಂತರ 2002–03ನೇ ಸಾಲಿನಿಂದ ಆಶ್ರಯ ಯೋಜನೆಯಡಿ ನಿಗದಿಪಡಿಸಿದ ಗುರಿಯಲ್ಲಿ ಪರಿಶಷ್ಟ ಜಾತಿ ಮತ್ತು ಪರಿಶಷ್ಟ ವರ್ಗದವರಿಗೆ ಶೇಕಡ 50% ಹಾಗೂ ಸಾಮಾನ್ಯ ವರ್ಗದವರಿಗೆ ಶೇಕಡ 50 ನಿಗದಿಪಡಿಸಿದ್ದು ಈ ಆದೇಶದಂತೆ ನಿಗಮವು ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಊ) ಪ್ರತಿ ವರ್ಷ ನಿಗದಿಪಡಿಸಲಾಗುವ ಗುರಿಯಲ್ಲಿ ಇದುವರೆಗೂ ಅಲೆಮಾರಿ ಜನಾಂಗದವರಿಗೆ ಪ್ರತ್ಯೇಕವಾದ ಮನೆಗಳ ಗುರಿಯನ್ನು ನಿಗದಿಪಡಿಸಿರುವುದಿಲ್ಲ. ಆದಕಾರಣ ಈ ವರ್ಗದ ಜನರಿಗೆ ಪ್ರತ್ಯೇಕವಾಗಿ ಮೀಸಲಾತಿಯನ್ನು ಜಾರಿಗೆ ತರುವ ಸಂಬಂಧ ಅಥವಾ ಪ್ರತ್ಯೇಕವಾಗಿ ಮನೆ/ನಿವೇಶನ ನೀಡುವ ಸಂಬಂಧ ಅಥವಾ ಪ್ರತ್ಯೇಕವಾಗಿ ಅಲೆಮಾರಿ ವರ್ಗದವರಿಗೆ ಯೋಜನೆಯನ್ನು ರೂಪಿಸುವ ವಿಷಯ ಪರಿಶೀಲನೆಯಲ್ಲಿದೆ.

ಶ್ರೀ ಲಾಲಾಜಿ ಆರ್ ಮೆಂಡನ್ (ಕಾಪು)111(230)

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

1) ಮಜೂರು ಗ್ರಾಮ ಪಂಚಾಯತ್ ವ್ಯಾಪ್ತಿ ಹೇರೂರು ಗ್ರಾಮಕ್ಕೆ ಬರುವ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇದೆಯೇ?

2) ಇದ್ದಲ್ಲಿ, ಹೇರೂರು ಗ್ರಾಮಸ್ಥರು 8 ಕಿಮೀ. ಬಳಸಿ ಗ್ರಾಮ ಪಂಚಾಯತ್ ಕಾರ್ಯಗಳಿಗೆ ಬರುವ ಬಗ್ಗೆ ಮಾಹಿತಿ ನೀಡಲಾಗಿದೆಯೇ?

3) ಈ ಮಾಹಿತಿ ಇದ್ದಲ್ಲಿ ರಸ್ತೆ ರಚನೆಗೆ ಈ ಸಾಲಿನಲ್ಲಿ ರೂ.30.00 ಲಕ್ಷಗಳನ್ನು ನೀಡಲು ಸರ್ಕಾರ ಆದೇಶಿಸುವುದೇ?

ಶ್ರೀ ಸಿ.ಎಂ.ಉದಾಸಿ

ಅ) ಉಡುಪಿ ತಾಲ್ಲೂಕು ಹೆರೂರು ಗ್ರಾಮವು ಮಜೂರು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿರುತ್ತದೆ.

ಆ) ಹೆರೂರು ಗ್ರಾಮದಿಂದ ಮಜೂರು ಗ್ರಾಮಕ್ಕೆ ನೇರ ರಸ್ತೆ ಸಂಪರ್ಕವಿಲ್ಲದಿರುವುದರಿಂದ ಕಾಪು ಮುಖಾಂತರ 8ಕಿ.ಮೀ. ಬಳಸಿ ಮಜೂರು ಗ್ರಾಮ ಪಂಚಾಯತ್ ಕಾರ್ಯಾಲಯಕ್ಕೆ ಬರಬೇಕಾಗುತ್ತದೆ.